35

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ ಡಿ.ಎಸ್. ಅರುಣ್, ಶ್ರೀ ಧನಂಜಯ ಸರ್ಜಿ ಹಾಗೂ ಶ್ರೀ ಎಸ್.ಎಸ್. ಭೋಜೇಗೌಡ ಇವರು ನಿಯಮ 330ರಡಿ ಪ್ರಸ್ತಾಪಿಸಿರುವ ಸೂಚನೆಯ ಕುರಿತು**

**ವಿಷಯ:**

ಕುವೆಂಪು ವಿಶ್ವವಿದ್ಯಾಲಯದ ದೂರ ಶಿಕ್ಷಣ ನಿರ್ದೇಶನಾಲಯದಲ್ಲಿ Online Programme Course ಗೆ ಸಂಬಂಧಿಸಿದಂತೆ LMS Software ಖರೀದಿಸಲು Prem Software Private Limited ಸಂಸ್ಥೆಯ ಟೆಂಡರ್ ಅನ್ವಯ ಖರೀದಿ ಆದೇಶ ಹೊರಡಿಸಿದ್ದರೂ ಡಿ.ಸಿ. ಬಿಲ್ಲಿನ ಮೂಲಕ ಬೇರೊಬ್ಬರಿಗೆ ಹಣ ಪಾವತಿಸುವ ಪ್ರಕ್ರಿಯೆಯಲ್ಲಿ ಲೋಪದೋಷಗಳು ಕಂಡುಬಂದಿರುವುದು ಹಾಗೂ ಇತರೆ ನ್ಯೂನತೆಗಳ ಬಗ್ಗೆ ನಿಯಮ 330ರ ಅಡಿ ಮಾನ್ಯ ಉನ್ನತ ಶಿಕ್ಷಣ ಸಚಿವರಲ್ಲಿ ಪ್ರಸ್ತಾಪಿಸಬಯಸುತ್ತೇನೆ.

**ಉತ್ತರ:**

ಕುವೆಂಪು ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯದ ಆನ್‌ಲೈನ್ ಕೋರ್ಸ್‌ಗಳ ನಿರ್ವಹಣೆಗೆ "Development Implementation and Maintenance of Learning Management System for Online Distance Learning Program" (LMS) ಸಾಫ್ಟ್‌ವೇರ್‌ನ್ನು ಯುಜಿಸಿ ನಿಯಮಾನುಸಾರ ಅನುಷ್ಠಾನಗೊಳಿಸಲು (LMS) ಸಾಫ್ಟ್‌ವೇರ್ ಮೂಲಕ ಸೇವೆ ಒದಗಿಸಲು ಸೂಕ್ತ ಸಂಸ್ಥೆಯನ್ನು ಆಯ್ಕೆ ಮಾಡುವ ಸಲುವಾಗಿ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್ ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಿ, L1 ಆಗಿ ಆಯ್ಕೆಗೊಂಡ M/s Pheme Software Pvt., Ltd., Bangalore, ಈ ಸಂಸ್ಥೆಯೊಂದಿಗೆ ರೂ. 96,00,000/- (ಶೇ. 18 ಜಿ.ಎಸ್.ಟಿ. ಹೊರತುಪಡಿಸಿ) ಗಳಿಗೆ ನಿಗದಿಪಡಿಸಿ, ಬಿಡ್‌ನ ಒಟ್ಟು ಮೊತ್ತವನ್ನು ಮೂರು ಹಂತದಲ್ಲಿ (60+20+20) ರಂತೆ ಪಾವತಿಸಲು ವಿಶ್ವವಿದ್ಯಾಲಯವು ಒಡಂಬಡಿಕೆ ಮಾಡಿಕೊಂಡಿರುತ್ತದೆ. ಅದರನ್ವಯ ಸಂಸ್ಥೆಯವರು ಸಲ್ಲಿಸಿರುವ ಬಿಲ್ಲನ್ನು ಪರಿಶೀಲಿಸಿ, ಇ-ಟೆಂಡರ್ ಆಯ್ಕೆಯಾದ M/s Pheme Software Pvt. Ltd., Bangalore, ಸಂಸ್ಥೆಗೆ ಮೊದಲ ಹಂತದ (60- ಶೇ. 18 ಜಿ.ಎಸ್.ಟಿ. ಸಹಿತ) ಮೊತ್ತ ರೂ. 67,96,800/- ಗಳನ್ನು ವಿಶ್ವವಿದ್ಯಾಲಯದಿಂದ ಸಂಸ್ಥೆಗೆ ಪಾವತಿಮಾಡಲಾಗಿರುತ್ತದೆ. ಉಳಿದ ಎರಡು ಹಂತಗಳ ಮೊತ್ತ ಪಾವತಿಗೆ ಬಾಕಿ ಉಳಿಸಿಕೊಂಡಿದ್ದು, ಬೇರೆ ಯಾವುದೇ ಸಂಸ್ಥೆಗೆ/ಬೇರೊಬ್ಬರಿಗೆ ವಿಶ್ವವಿದ್ಯಾಲಯವು ಪಾವತಿಸಿರುವುದಿಲ್ಲ.

**ಸಂಖ್ಯೆ: ಇಡಿ 15 ಯುಎಸ್‌ವಿ 2025**

**(ಡಾ: ಎಂ.ಸಿ. ಸುಧಾಕರ್)**
ಉನ್ನತ ಶಿಕ್ಷಣ ಸಚಿವರು